# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ

## ಸಿ. ಸಿ. ನಂಃ **737/2018**

ಪಿ.ಡಬ್ಲ್ಯೂ- **2**
ಸಿ.ಡಬ್ಲೂ- **3**

| | | |
|---|---|---|
| ಹೆಸರು | ಃ- | ಚೆನ್ನಪ್ಪ ಬನಕಾರ |
| ತಂದೆ / ಗಂಡನ ಹೆಸರು | ಃ- | ಮಹಾದೇವಪ್ಪ |
| ವಯಾ | ಃ- | 60 ವರ್ಷ |
| ಉದ್ಯೋಗ | ಃ- | ಖಾಸಗಿ ಚಾಲಕ |
| ವಾಸಸ್ಥಳ | ಃ- | ಅಣ್ಣಿಗೇರಿ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 20-11-2024 |

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

ನನಗೆ ಆರೋಪಿತರ ಪರಿಚಯವಿಲ್ಲ. ಚಾಸಾ-2 ರವರು ನನ್ನ ಸಂಗಡ ಆಟೋ ಚಾಲನೆ ಮಾಡುತ್ತಾರೆ. ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲಾ. ಪೊಲೀಸರು ನನಗೆ ಒಂದು ದಾಖಲೆಯ ಮೇಲೆ ಸಹಿ ಮಾಡಲು ತಿಳಿಸಿದ್ದು, ನಾನು ಒಂದು ದಾಖಲೆ ಮೇಲೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -

ದಿನಾಂಕ 14-07-2018 ರಂದು ಚಾಸಾ-1 ರವರು ಅಣ್ಣಿಗೇರಿ ಶಹರದ ಹರಣಶಿಕಾರಿ ಕಾಲನಿಯಲ್ಲಿ ಒಬ್ಬ ವ್ಯಕ್ತಿಯ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಬಾತ್ಮಿ ಬಂದಿದ್ದು, ನನಗೆ ಮತ್ತು ಚಾಸಾ-2 ರವರಿಗೆ ಚಾಸಾ-4 ರವರಿಂದ ಕರೆದು ವಿಷಯವನ್ನು ತಿಳಿಸಿ ಹರಣಶಿಕಾರಿ ಕಾಲನಿಯ ಬಳಿ ಹೋಗಿ ದೂರದಿಂದ ವೀಕ್ಷಣೆ ಮಾಡುತ್ತಿರುವ ಸಮಯದಲ್ಲಿ ನ್ಯಾಯಾಲಯದ ಎದುರು ಇದ್ದ ಆರೋಪಿತನು ತನ್ನ ಕೈಯಲ್ಲಿ ಒಂದು ಚೀಲವನ್ನು ಇಟ್ಟುಕೊಂಡು ನಿಂತು ಏನೋ ಮಾರಾಟ ಮಾಡುತ್ತಿರುವ ಬಗ್ಗೆ ನೋಡಿರುತ್ತೇವೆ ಅಂದರೆ ಸರಿಯಲ್ಲ.

ನಂತರ ಚಾಸಾ-1 ಮತ್ತು ಚಾಸಾ-4, ಚಾಸಾ-5 ರವರು ಸದರಿ ವ್ಯಕ್ತಿಯನ್ನು ಗೇರಾಯಿಸಿ ಸುತ್ತುಹಾಕಿ ಆತನನ್ನು ನಮ್ಮ ಸಮಕ್ಷಮದಲ್ಲಿ ಶೋದನೆಯನ್ನು ಮಾಡಿ ಆತನ ಚೀಲದಲ್ಲಿ 180 ಎಂ.ಎಲ್. ನ ಒಟ್ಟು 30 ಒಲ್ಡ ಟ್ಯಾವರಲ್ ವೀಸ್ಕಿ ಟೆಟ್ರಾಪ್ಯಾಕೇಟಗಳು ಮತ್ತು ಒಂದು ಚೀಲ ಕಂಡು ಬಂದಿದ್ದು ಮದ್ಯ ಮಾರಾಟ ಮಾಡಲು ಯಾವುದೇ ಪಾಸ ವ ಪರಮಿಟ್ ಇದ್ದ ಬಗ್ಗೆ ಕೇಳಲಾಗಿ ಆತನು ಇರುವುದಿಲ್ಲ ಎಂದು ಹೇಳಿ, ಆತನ ಹೆಸರನ್ನು ಹೇಳಿ ಚಾಸಾ-1 ರವರು ನನ್ನ ಮತ್ತು ಚಾಸಾ-2 ರವರ ಸಮಕ್ಷಮದಲ್ಲಿ ಸದರಿ ಟೆಟ್ರಾಪ್ಯಾಕೇಟಗಳನ್ನು ಮತ್ತು ಚೀಲವನ್ನು ನಿಪಿ-1 ರಂತೆ ಪಂಚನಾಮೆ ಮಾಡಿ ಜಪ್ತು ಪಡಿಸಿ ನಮ್ಮ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಜಪ್ತು ಪಡಿಸಿದ ಮುದ್ದೆ ಮಾಲುಗಳನ್ನು ಒಟ್ಟಾಗಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದರ ಬಗ್ಗೆ ನಮಗೆ ಮಾಹಿತಿಯನ್ನು ನೀಡಿರುತ್ತಾರೆ ಅಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ವಶಪಡಿಸಿಕೊಂಡ ಮದ್ಯದ ಪ್ಯಾಕೇಟಗಳು ನ್ಯಾಯಾಲಯದ ಮುಂದೆ ಇದ್ದ ಮದ್ಯದ ಪ್ಯಾಕೇಟಗಳು ಅಂದರೆ ಸರಿಯಲ್ಲ. ಸದರಿ ಮದ್ಯದ ಪ್ಯಾಕೇಟಗಳನ್ನು ಈಗಾಗಲೇ ಮು.ಮಾಲು 01 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ಮು.ಮಾಲು 1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ತಾನು ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಪಂಚನಾಮೆಗೆ ಹಾಜರಿದ್ದು, ನನ್ನ ಸಮಕ್ಷಮದಲ್ಲಿ ಮದ್ಯವನ್ನು ವಶ ಪಡಿಸಿಕೊಂಡಿದ್ದು ಮತ್ತು ನನ್ನ ನಿರ್ದೇಶನದ ಮೇರೆಗೆ ನಿಪಿ-1 ಪಂಚನಾಮೆ ಬರೆದಿದ್ದು ಮತ್ತು ನಾನು ಅದನ್ನು ಓದಿ ಸಹಿಯನ್ನು ಮಾಡಿದ್ದರು ಸಹ, ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

PW-2
CW-3

*<u>ಪಾಟೀಸವಾಲು ಆರೋಪಿ ಪರ ಃ ಶ್ರೀ ಆರ್ ಎಂ ಆರ್ ವಕೀಲರಿಂದ ಃ -</u>*

ಪಾಟೀಸವಾಲು ಇಲ್ಲಾ ಎಂದು ನಿವೇದಿಸಿಕೊಂಡ ಕಾರಣ ಪಾಟೀಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

<u>ಮರು ವಿಚಾರಣೆ ಃ ಇಲ್ಲಾ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**
**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**